# ಮೂಲ ಮುಟ್ಟಿದ ಖುಷಿ ಐತಿ



## ಐಶ್ವರ್ಯ ಬಸ್ಪುರೆ

### ಉದಯದ 'ಮಹಾಸತಿ'ಯ ಆರತಿ ಹಿರೇಮಠ

★ *ಮೊದಲ ಅವಕಾಶ ಬಂದಿದ್ದಾದರೂ ಹೇಗೆ?*

ನಟಿಯಾಗಬೇಕು ಅಂತ ಅಂದುಕೊಂಡಿರಲಿಲ್ಲ. ಕಾಲೇಜಿನಲ್ಲಿ ಸಮಾರಂಭಗಳಲ್ಲಿ ಭಾಗವಹಿಸುವುದನ್ನು ಬಿಟ್ಟರೆ ಬೇರೆ ಇನ್ನೇನೂ ಗೊತ್ತಿರಲಿಲ್ಲ. ಈ ಅವಕಾಶಕ್ಕೆ ಕಾರಣ ಆಗಿದ್ದು 'ಮಿಸ್ ಸೌಥ್ ಇಂಡಿಯಾ ಕ್ವೀನ್' ಪುರಸ್ಕಾರ. ಕೇರಳ, ಕರ್ನಾಟಕ, ತಮಿಳುನಾಡು, ತೆಲಂಗಾಣ, ಆಂಧ್ರ ಪಂಚರಾಜ್ಯಗಳನ್ನು ಒಳಗೊಂಡ 'ಸೌಥ್ ಇಂಡಿಯಾ ಕ್ವೀನ್' ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಕಿರೀಟ ನನ್ನ ಮುಡಿಗೆ ಏರಿಬಂತು. ಅದರ ಜೊತೆಗೆ ನಾನು ಮಾಡೆಲಿಂಗ್ ಮತ್ತು ಡಿಸೈನಿಂಗ್ ಕೂಡ ಮಾಡುತ್ತಿದ್ದೆ. ಅದೇ ಸಂದರ್ಭದಲ್ಲಿ ಸಾಗರ್ ಪುರಾಣಿಕ್ 'ಮಹಾಸತಿ'ಗೆ ಆಹ್ವಾನ ನೀಡಿದರು. ರಿಯಾಲಿ ಷೋ ಒಂದಕ್ಕೂ ಅವಕಾಶ ಬಂತು. ನಾನು ಧಾರಾವಾಹಿ ಆಯ್ಕೆ ಮಾಡಿಕೊಂಡು ಆಡಿಷನ್ ನೀಡಿದೆ. ತಕ್ಷಣ ಏನೂ ಪ್ರತಿಕ್ರಿಯೆ ಬರಲಿಲ್ಲ. ಸುಮ್ಮನಿದ್ದೆ ಒಂದು ವಾರದ ನಂತರ ಶೂಟಿಂಗ್‌ಗೆ ಬರಲು ಹೇಳಿದರು. ಅದೂ ನಾನು ಪ್ರಧಾನ ಪಾತ್ರಕ್ಕೆ ಆಯ್ಕೆ ಆಗಿದ್ದೆ.

★ *ನಿಮಗೆ ಆದ ಅನುಭವಗಳ ಬಗ್ಗೆ ಹೇಳಿ...*

ನಾನು ಬೆಂಗಳೂರಿನಲ್ಲಿ ಬೆಳೆದಿದ್ದು. ನಮ್ಮ ಮೂಲ ಬೇರುಗಳನ್ನೇ ಮರೆತಿದ್ದೆ. ಅಮ್ಮ ದಾವಣಗೆರೆಯವರು. ಅಪ್ಪ ಬೀದರ್‌ನವರು. ನಮ್ಮ ಸಂಬಂಧಿಗಳು ಬೀದರ್– ಕಲಬುರಗಿಯಲ್ಲೇ ಹೆಚ್ಚು. ನನಗೆ ಅಲ್ಲಿನ ಸೊಗಡಿನ ಕನ್ನಡವೇ ಗೊತ್ತಿರಲಿಲ್ಲ. ಈಗ ಅದಕ್ಕೆ ಸ್ವಲ್ಪ ಹೊಂದಿಕೆಯಾಗುವಂತೆ ಉತ್ತರಕರ್ನಾಟಕದ ಮಾತನ್ನು ಕಲಿತಿದ್ದೇನೆ. ಭಾರೀ ಖುಷಿ ಆಗ್ತೈತಿ. ನನಗೆ ಕಳೆದುಕೊಂಡಿದ್ದು ಸಿಕ್ಕಿದೆ ಅಂತ ಅನ್ನಿಸುತ್ತಿದೆ. ಈಗ ಬೆಂಗಳೂರಿನ ಮಾತೇ ಮರೆಯುತ್ತಿದೆ.

ಆದರೆ ಆರಂಭದಲ್ಲಿ ಅನುಭವಿಸಿದ ಯಾತನೆ ಅಷ್ಟಿಷ್ಟಲ್ಲ. ಕಣ್ಣೀರು ಹರಿಸಿದ್ದೇನೆ. ನಾನು ಪೋಷಕರನ್ನು ಬಿಟ್ಟು ನಾಲ್ಕು ದಿನ ಇದ್ದವಳಲ್ಲ. ಅಂತಹದ್ದರಲ್ಲಿ ಬೈಲಹೊಂಗಲದಂತಹ ಊರಿನ ಹಳ್ಳಿಯ ವಾತಾವರಣದಲ್ಲಿ ಇರುವುದು ಕಷ್ಟ ಆಯಿತು. ಓಡಿ ಹೋಗೋಣ ಅನ್ನಿಸುವಷ್ಟು ತಲೆ ಕೆಟ್ಟಿತ್ತು. ಆರಂಭದಲ್ಲಿ ತಿಂಗಳಲ್ಲಿ ಹದಿನೈದು ದಿನ ಶೂಟಿಂಗ್ ಎಂದಿದ್ದರು. ಆದರೆ ಅದು 25 ದಿನಗಳವರೆಗೂ ಎಳೆದುಕೊಂಡು ಹೋಯಿತು.ಆಗೆಲ್ಲ ಪುರಾಣಿಕ್ ಆತ್ಮ ಸ್ಥೈರ್ಯ ತುಂಬಿದರು. ನಂತರ ಪರಿಸ್ಥಿತಿಗೆ ಹೊಂದಿಕೊಂಡೆ. ತಂಡದಲ್ಲಿಯೂ ಮನೆಯ ವಾತಾವರಣ ಸಿಕ್ಕಿದೆ. ನಮ್ಮ ಪೋಷಕರು ಆಗಾಗ ಬಂದು ಹೋಗುತ್ತಾರೆ. ಸ್ಥಳೀಯರ ಮರೆಯಲಾರದ ಪ್ರೀತಿ ಸಿಕ್ಕಿದೆ. ನನಗೊಂದು ಸ್ಥಾನ ಜನರ ಮನದಲ್ಲಿ ಸಿಕ್ಕಿದೆ ಎಂದು ಅನ್ನಿಸಿದೆ.

★ *ಬಣ್ಣ ಹಚ್ಚಿದಾಗ ಹೇಗೆನಿಸಿತು?*

ಮೊದಲೂ ಫ್ಯಾಷನ್ ಷೋ.. ಮಾಡೆಲಿಂಗ್ ಮಾಡುತ್ತಿದ್ದೆ. ಆಗಲೂ ಕ್ಯಾಮೆರಾ ಎದುರಿಸಿದ್ದೆ. ತೆರೆಯಲ್ಲಿ ಅದೆಲ್ಲದಕ್ಕಿಂತ ಭಿನ್ನ ಅಂತ ಅನ್ನಿಸಿತು. ನನಗೆ ಕ್ಯಾಮೆರಾವನ್ನು ಹೇಗೆ ಎದುರಿಸಬೇಕು ಎನ್ನುವುದೂ ಗೊತ್ತಿರಲಿಲ್ಲ. ಹಾಗೆಂದು ಆ ಬಗ್ಗೆ ಅಂಜಿಕೆಯೂ ಇಲ್ಲಿಲ್ಲ. ತುಂಬಾ ಸಾದಾಸೀದ ಇದ್ದೆ. ಎಲ್ಲದನ್ನೂ ಇಲ್ಲೇ ಕಲಿಯುತ್ತಿದ್ದೇನೆ.

★ *ಬಾಲ್ಯದಲ್ಲಿ ನಿಮ್ಮ ಕನಸು ಏನಾಗಿತ್ತು?*

ಚಿಕ್ಕವಳಿದ್ದಾಗ ಸಿನಿಮಾ ಬಗ್ಗೆ ಕುತೂಹಲ ಇತ್ತು. ನಟಿಯಾದರೆ ಹೇಗೆ ಎಂದೂ ಅನ್ನಿಸಿತ್ತು. ಹಾಗೆಂದು ನಟಿ ಆಗುವ ಬಗ್ಗೆ ಕನಸು ಕಂಡವಳಲ್ಲ. ಮನಃಶಾಸ್ತ್ರ ಓದಿದ್ದರಿಂದ ಆ ಕ್ಷೇತ್ರದಲ್ಲಿಯೇ ತೊಡಗುವ ಯೋಚನೆ ಇತ್ತು ಅದಕ್ಕೂ ಕಾರಣ ಗಡಿಯಾರದ ಗಂಟೆ ನೋಡುತ್ತಾ ಕೆಲಸ ಮಾಡುವುದು ನನಗೆ ಇಷ್ಟ ಇರಲಿಲ್ಲ. ಏನಾದರೂ ಸಮಾಜಮುಖಿಯಾಗಿ ಮಾಡಬೇಕು. ಆ ಮೂಲಕ ಕಲಿಯಬೇಕು ಎನ್ನುವುದಾಗಿತ್ತು. ಅದಕ್ಕಾಗಿ ಎನ್‌ಜಿಒ ಮಾಡುವ ಉದ್ದೇಶವೂ ಇತ್ತು. ಇದರ ಜೊತೆಗೆ ಹವ್ಯಾಸವಾಗಿ ಮಾಡೆಲಿಂಗ್ ಮುಂದುವರಿಸುತ್ತಿದ್ದೆ.

★ *ಹಾಗಾದರೆ ಟಿವಿ ಲೋಕದಿಂದ ಹಿಂದೆ ಸರಿಯುತ್ತೀರಾ?*

ಯಾವುದೂ ಶಾಶ್ವತ ಅಲ್ಲ. ಸದ್ಯ ಇಲ್ಲೇ ಇರುವುದು ಖಚಿತ. ನನಗೆ ಸಿನಿಮಾ ಸೇರಿದಂತೆ ಬೇರೆ ಬೇರೆ ಅವಕಾಶಗಳು ಹುಡುಕಿಕೊಂಡು ಬರುತ್ತಿವೆ. ಬೆಂಗಳೂರಿನಿಂದ ದೂರ ಇರುವ ಕಾರಣಕ್ಕೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಮುಂದೆ ಒಳ್ಳೆಯ ಪಾತ್ರಗಳಿಗೆ ಜೀವ ತುಂಬಬೇಕು ಎಂದಿದ್ದೇನೆ. ಈಗ ನಟಿಯಾಗಿ ಎಲ್ಲಾ ರೀತಿಯ ಪಾತ್ರಗಳನ್ನು ನಿರ್ವಹಿಸಬೇಕು ಎಂದುಕೊಂಡಿದ್ದೇನೆ. ಮನೆಯಲ್ಲಿ ಕುಳಿತು ಕಾಲ ಕಳೆಯುವ ಮನಸ್ಥಿತಿ ನನಗಿಲ್ಲ. ಬದುಕನ್ನು ಸವಾಲಿಗೆ ಒಡ್ಡಲು ಸಿದ್ಧಳಿದ್ದೇನೆ. ಮುಂದೆ ಒಂದು ಹೆಜ್ಜೆ ಮುಂದೆ ಹೋಗಬೇಕು. ಕೇವಲ ಒಂದು ಪಾತ್ರವಾಗಿ ಕಾಣಿಸಿಕೊಳ್ಳುವುದಕ್ಕಿಂತ. ಹಲವು ಪಾತ್ರಗಳನ್ನು ಕಟ್ಟುವ ನಿಟ್ಟಿನಲ್ಲಿಯೂ ಯೋಚಿಸಬೇಕಿದೆ. ಅಂದರೆ ತೆರೆಯ ಹಿಂದೆ ನಿಂತು ನಿರ್ದೇಶನ ಮಾಡುವ ಆಸೆಯಿದೆ.

ಯಾವುದನ್ನೂ ಕಲಿಯದೇ ಮಾಡಲು ಆಗುವುದಿಲ್ಲ. ಅದನ್ನು ನೋಡಿ ಕಲಿಯುವುದಕ್ಕಿಂತ ಮಾಡಿ ಅನುಭವಿಸಿಯೇ ಕಲಿಯಬೇಕು. ಹೀಗಾಗಿ ಸಹಾಯಕ ನಿರ್ದೇಶಕಿಯಾಗಿಯೂ ಪಳಗಬೇಕು. ಆ ನಂತರ ನಿರ್ದೇಶನವನ್ನೂ ಮಾಡುತ್ತೇನೆ.

■ ರಾಗು